ಶ್ರೀ ಎಸ್. ಆರ್. ಕಂಠಿ.—ಎರ್ಮ್ಯಾ ಇದೆ. ಅಗ್ರಿಮೆಂಟ್ ಇದೆ. ಡಿಸ್‌ಪ್ಯೂಟ್ ಇದೆ. ಈಗ ಆ ಡಿಸ್‌ಪ್ಯೂಟ್ ಇನ್ನೂ ಸೆಕಾರೆ ಆಗಿಲ್ಲ.

Grant-in-aid to the Private High Schools in Coorg District.

*Q.—1061. Sri A. P. APPANNA (Virajpet).—

Will the Government be pleased to state:—

(*a*) how many of the Private High Schools in Coorg District are not given grants-in-aid even though they have completed three years of their existence;

(*b*) whether it is not the policy of the Government to give grants-in-aid to the Private High Schools after three years of their starting;

(*c*) if so, why Government has not given grant-in-aid to the schools mentioned in clause (*a*)?

*A.—Sri S. R. KANTHI (Minister for Education).—

(*a*) Six.

(*b*) There is no such policy.

(*c*) For three schools no grant can be paid as five years have not elapsed as per conditions of sanction of the schools.

In respect of the other three schools, the respective managements have not furnished the audited financial statements.

Sri A. P. APPANNA.—Sir, in answer to (*b*) it is said that there is no such policy. May I know the policy of the Government with regard to giving grant-in-aid?

†Sri S. R. KANTHI.—The policy of Government is now clear. But, when these High Schools were permitted to be started, the policy was not the same because it was different on account of certain circumstances.

Sri A. P. APPANNA.—What are the circumstances that made the Government attach this condition in regard to these three High Schools?

Sri S. R. KANTHI.—We have laid down a condition that for five years they are not entitled to any grant. They have agreed to the condition and given it in writing.

Sri A. P. APPANNA.—Has the Government waived such conditions in any other case?

Sri S. R. KANTHI.—I am not aware.

Sri S. M. KRISHNA.—What is the new policy of the Government, Sir?

Sri S. R. KANTHI.—The policy is not unknown to my friend, Sir.

(*Laughter.*)

Sri A. P. APPANNA.—Sir, is it not a fact that in certain High Schools, specially in Bangalore City, grants were given before three years lapsed?

Sri S. R. KANTHI.—No, Sir.

Sri SANJEEVANATH AIKALA.—What is the decision arrived at with regard to this policy in the Head Masters and Management Conference yesterday, Sir?

Sri S. R. KANTHI.—Sir, the Management and Head Masters met the Minister. The idea was not to evolve any policy but to know their mind.

Sri SANJEEVANATH AIKALA.—What were their suggestions?

Mr. SPEAKER.—How does it arise under this question?

Sri S. R. KANTHI.—Sir, I may say that this question did not come up there.

Sri SANJEEVANATH AIKALA.—Sir, some High Schools in Coorg have not received grant for the last three years.

Mr. SPEAKER.—The Hon'ble Member has entirely misunderstood the question.

Sri S. R. KANTHI.—Sir, these three High Schools were started in 1960. Long before the condition of three years for the purpose of grant was imposed, there were no uniform conditions as such at that time. The three High Schools agreed to the condition laid down by the Department because they were very anxious to start the High Schools. The condition is, that no grant will be given for five years.

Sri SANJEEVANATH AIKALA.—Sir, may I ask Sri Appanna whether this is so? (*Laughter.*)

(*No answer.*)

Mr. SPEAKER.—The Chair cannot compel him to answer.

(*Laughter.*)

Sri S. SIVAPPA.—Have the Government revised their policy of not giving grants for the first three years? Will the same rule be applied to Coorg High Schools?

Sri S. R. KANTHI.—These 3 schools had agreed to the conditions that no grant would be paid to them for five years. Therefore the question of relaxation does not arise as a matter of right. They might make an application and the Government will always consider it.

ಶ್ರೀ ಎಚ್. ಆರ್. ಕೇಶವ ಮೂರ್ತಿ.—1963-64ನೆಯ ಸಾಲಿನಲ್ಲಿ ಪ್ರಾರಂಭಿಸಿರುವ ಹೈಸ್ಕೂಲುಗಳಿಗೆ ಫೀ ಕಾಂಪೆನ್‌ಸೇಷನ್ ಗ್ರಾಂಟ್ ಕೊಡಬೇಕಾದ್ದನ್ನು ಏಕೆ ಕೊಟ್ಟಿಲ್ಲ, ಸ್ವಾಮಿ?

ಶ್ರೀ ಎಸ್. ಆರ್. ಕಂಠಿ.—ಈ ಪ್ರಶ್ನೆ ಇದರಲ್ಲಿ ಬರುವುದಿಲ್ಲ. ಆದರೂ ಹೇಳುತ್ತೇನೆ. ಫೀ ಕಾಂಪೆನ್‌ಸೇಷನ್ ಕೊಡುವುದಕ್ಕೆ ಮುಂಚೆ ಆ ಹೈಸ್ಕೂಲನ್ನು ರೆಕಗ್ನೈಸ್ ಮಾಡಬೇಕಾಗುತ್ತದೆ. ಮೊದಲು ಅವರು ಸ್ಕೂಲುಗಳನ್ನು ನಡೆಸುವುದಕ್ಕೆ ಪರ್ಮಿಷನ್ ಕೊಡುತ್ತೇವೆ. ಅದು ಬೇರೆ. ರೆಕಗ್ನೈಸ್ ಮಾಡುವುದು ಎಂದರೆ ಅವರು ಏನೇನು ನಿಯಮಗಳನ್ನು ಪಾಲಿಸಬೇಕೋ ಆ ನಿಯಮಗಳನ್ನೆಲ್ಲ ಸರಿಯಾಗಿ ಪಾಲಿಸಿದರೆ ಮಾತ್ರ ರೆಕಗ್ನಿಷನ್ ಕೊಡುತ್ತೇವೆ. ರೆಕಗ್ನಿಷನ್ ಸಿಕ್ಕದೆ ಫೀ ಕಾಂಪೆನ್‌ಸೇಷನ್ ಸಿಕ್ಕುವುದಿಲ್ಲ.

ಶ್ರೀ ಜಿ. ಮಾದೇಗೌಡ.—ಸರ್ಕಾರದವರು ಕೊಡಬೇಕಾದ ಗ್ರಾಂಟನ್ನು ಮೂರು ಅಥವಾ ಐದು ವರ್ಷ ಕೊಡದೆ ಹೋದರೂ ಖಾಸಗಿ ಹೈಸ್ಕೂಲುಗಳು ವರ್ಷಂಪ್ರತಿ ಸರಿಯಾಗಿ ದಕ್ಷತೆಯಿಂದ ನಡೆಯುತ್ತಿದೆಯೇ ಎನ್ನುವುದನ್ನು ಸರ್ಕಾರ ವಿಚಕ್ಷಣೆಯಿಂದ ನೋಡಿಕೊಳ್ಳುತ್ತಿದೆಯೇ?

ಶ್ರೀ ಎಸ್. ಆರ್. ಕಂಠಿ.— ಆ ಜವಾಬ್ದಾರಿ ಸರ್ಕಾರದ ಮೇಲೆ ಎಷ್ಟಿದೆಯೋ ಅಷ್ಟೇ ಮಾನ್ಯ ಸದಸ್ಯರ ಮೇಲೆಯೂ ಇದೆ. ಸರ್ಕಾರದವರು ಇದನ್ನು ಮಾಡುತ್ತಿದ್ದಾರೆ.

ಶ್ರೀ ಜಿ. ಮಾದೇಗೌಡ.—ಸರ್ಕಾರದ ಗ್ರಾಂಟ್ ಇಲ್ಲದೆ ನಡೆಯುತ್ತಿರತಕ್ಕ ಶಾಲೆಗಳು ದೇಶದಲ್ಲಿ ಎಷ್ಟಿವೆ?

ಶ್ರೀ ಎಸ್. ಆರ್. ಕಂಠಿ.—ಮೂರು ವರ್ಷದ ಗ್ರಾಂಟ್ ಕೊಡುವುದಿಲ್ಲ ಎನ್ನುವ ವರ್ಗಕ್ಕೆ ಬರುವ ಶಾಲೆಗಳು 245 ಎಂದು ಕಾಣುತ್ತದೆ. ಈ ಮೂರು ಶಾಲೆಗಳಿಗೆ ಮಾತ್ರ ಐದು ವರ್ಷ ಎಂದು ಕಂಡಿಷನ್ ಹಾಕಿದೆ.

ಶ್ರೀ ಬಿ. ಎಲ್. ಗೌಡ.—ಕಡ್ಡಾಯ ವಿದ್ಯಾಭ್ಯಾಸದ ಪರಿಣಾಮವಾಗಿ ಹೆಚ್ಚು ಹೆಚ್ಚು ಜನ ಬಾಲಕರು ಹೈಸ್ಕೂಲಿಗೆ ಬರುವುದರಿಂದ ಒಂದು ವೇಳೆ ಖಾಸಗಿಯವರಿಗೆ ಗ್ರಾಂಟ್ ಕೊಡದೆ ಹೋದರೆ ಅವರು ಹೈಸ್ಕೂಲುಗಳನ್ನು ನಿಲ್ಲಿಸಿದರೆ ಏನು ಮಾಡುತ್ತೀರಿ?

ಶ್ರೀ ಎಸ್. ಆರ್. ಕಂಠಿ.—ಅದು ಬರೀ ಊಹಾಪೋಹದ ಪ್ರಶ್ನೆ. ನಾವು ಗ್ರಾಂಟ್ ಕೊಡುವುದಿಲ್ಲವೆಂದರೂ 245 ಹೈಸ್ಕೂಲುಗಳವರು ಶಾಲೆಗಳನ್ನು ನಡೆಸುತ್ತೇವೆಂದು ಮುಂದೆ ಬಂದಿದ್ದಾರೆ.

ಶ್ರೀ ಕೆ. ಎಸ್. ನೂರ್ಯನಾರಾಯಣ ರಾವ್.—ಮೂರು ವರ್ಷ ಗ್ರಾಂಟ್ ಕೊಡುವುದಿಲ್ಲವೆಂದು ಹೊಸದಾಗಿ ಪ್ರಾರಂಭವಾಗುವ ಹೈಸ್ಕೂಲುಗಳ ಸಂಬಂಧವಾಗಿ ಹೇಳಿದ್ದೀರಿ. ಆದರೆ ಶಾಲೆಗಳನ್ನು ನಡೆಸುವುದಕ್ಕೆ ಪರ್ಮಿಷನ್ ಕೊಟ್ಟಮೇಲೆ ಗ್ರಾಂಟನ್ನು ಕೊಡದೆ ಇದ್ದರೂ ಫೀ ಕಾಂಪೆನ್‌ಸೇಷನ್ ಕೊಡುವುದನ್ನು ದಯವಿಟ್ಟು ಪರಿಶೀಲನೆ ಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಈ ಶಾಲೆಗಳನ್ನು ರೆಕಗ್ನೈಷ್ ಮಾಡಿದ ತಕ್ಷಣ ಕೊಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾನೂನಿನ ಪ್ರಕಾರ ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡಬೇಕು ಎನ್ನುವ ಸಲಹೆಯನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಕೆಲವರಿಗೆ ಒಂದು, ಕೆಲವರಿಗೆ ಇನ್ನೊಂದು ರೀತಿ ಮಾಡಿ ಸುತ್ತೂರು ಮಠದವರು ನಡೆಸುವ ಕೆಲವು ಇನ್‌ಸ್ಟಿಟ್ಯೂಷನ್‌ಗಳಿಗೆ ಕಾನೂನು ಬಿಟ್ಟು ಸಹಾಯ ಮಾಡಿದ್ದೀರಲ್ಲವೇ?

Sri S. R. KANTHI.—According to the rules. ಆ ರೀತಿ ಕೊಟ್ಟಿಲ್ಲ. ಅವರು ಹೋದ ವರ್ಷ ಪ್ರಾರಂಭಿಸಿದ ಹೈಸ್ಕೂಲಿಗೆ ಸರ್ಕಾರದಿಂದ ಮೂರು ವರ್ಷ ಗ್ರಾಂಟ್ ಕೊಡುವುದಿಲ್ಲ ಎನ್ನುವ ಕಂಡಿಷನ್ ಹಾಕಿದ್ದೇವೆ. ಅವರು ಆ ಪ್ರಕಾರವಾಗಿ ಶಾಲೆಯನ್ನು ನಡೆಸುತ್ತಿದ್ದಾರೆ. ಸುಮ್ಮನೆ ಏನೋ ಒಂದು ಭಾವನೆ ಮಾಡಿಕೊಂಡರೆ ಆಗುವುದಿಲ್ಲ. ಮಾನ್ಯ ಸದಸ್ಯರು ಕೇಳುವುದಕ್ಕೆ ಮುಂಚೆ ನತ್ಯಾಂಶವೇನು ಎನ್ನುವುದನ್ನು ತಿಳಿದುಕೊಳ್ಳಬೇಕು.

ಶ್ರೀ ಕೆ. ದೇವಯ್ಯ.—ಮಾನ್ಯ ಮಂತ್ರಿಗಳು ಉತ್ತರಕೊಡುತ್ತ ಕೆಲವು ಹೈಸ್ಕೂಲುಗಳಿಗೆ ಮೂರು ವರ್ಷಗಳು ಶಾಲೆಗಳನ್ನು ನಡೆಸಿದ ನಂತರ ಗ್ರಾಂಟ್ ಕೊಡುತ್ತೇವೆ ಎಂದು ಹೇಳಿದರು. ಈ ಹೈಸ್ಕೂಲುಗಳಿಗೆ ಐದು ವರ್ಷ ಎಂದು ಹಾಕಿರುವುದು ಪಕ್ಷಪಾತವಲ್ಲವೇ, ಸ್ವಾಮಿ?

ಶ್ರೀ ಎಸ್. ಆರ್. ಕಂಠಿ.—ಅದರಲ್ಲಿ ಪಕ್ಷಪಾತವೇನೂ ಇಲ್ಲ. ಮಾನ್ಯ ಸದಸ್ಯರು ಬಂದು ಐದು ವರ್ಷ ಗ್ರಾಂಟ್ ಕೇಳುವುದಿಲ್ಲ, ಪರ್ಮಿಷನ್ ಕೊಡಿ ಎಂದು ಹೇಳಿದರು. ಐದು ವರ್ಷ ಬಹಳ ಹಾಸ್ತಿಯಾಗುತ್ತದೆ, ಅದನ್ನು ಸ್ವಲ್ಪ ರಿಲಾಕ್ಸ್ ಮಾಡಬೇಕು ಎಂದು ಅರ್ಜಿ ಕೊಡಿ, ನೋಡೋಣ ಎಂದು ಹೇಳಿದ್ದೇನೆ.

ಶ್ರೀ ಜಿ. ಮಾದೇಗೌಡ.—ಸರ್ಕಾರದವರ ಸಹಾಯವಿಲ್ಲದೆ ತಮ್ಮ ಸ್ವಂತ ಶಕ್ತಿಯ ಮೇಲೆ ಶಾಲೆಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲದೆ ಇರುವಂಥ ಶಾಲೆಗಳನ್ನು ಸರ್ಕಾರದವರೇ ವಹಿಸಿಕೊಂಡು ನಡೆಸುವುದಕ್ಕೆ ಸರ್ಕಾರ ತಯಾರಾಗಿದೆಯೇ, ಸ್ವಾಮಿ?

ಶ್ರೀ ಎಸ್. ಆರ್. ಕಂಠಿ.—ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸ್ವಲ್ಪ ಯೋಚನೆ ಮಾಡಬೇಕು. ಜನಗಳು ಶಾಲೆಗಳನ್ನು ನಡೆಸುತ್ತೇವೆಂದು ಮುಂದೆ ಬಂದು ಹೈಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಅವರಿಗೆ ಸ್ವಲ್ಪ ಬೆನ್ನು ತಟ್ಟಿದರೆ ಏನಾದರೂ ಮಾಡುವುದಕ್ಕೆ ಸಿದ್ಧರಿರುತ್ತಾರೆ. ಮಾನ್ಯ ಸದಸ್ಯರು ಆ ಪ್ರಕಾರವಾಗಿ ಮಾಡಿದರೆ ನಮ್ಮ ದೇಶದಲ್ಲಿ ಬೆಳೆಯುತ್ತಿರುವ ವಿದ್ಯಾಭ್ಯಾಸಕ್ಕೆ ಬಹಳ ಅನುಕೂಲವಾಗುತ್ತದೆ. ಸರ್ಕಾರವೇ ಎಲ್ಲವನ್ನೂ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ.